# ಮಾನವೀಯತೆ ಮೆರೆದ ಹೊರಟ್ಟಿ

ಹುಬ್ಬಳ್ಳಿ:ತಮ್ಮತೋಟದಕೆಲಸಗಾರಗೂಳಪ್ಪಬೂದಿಹಾಳಅವರುತೀವ್ರಅನಾರೋಗ್ಯಕ್ಕೀಡಾಗಿದ್ದರಿಂದ ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ಅವರು ಅವರ ನಿವಾಸಕ್ಕೆ ತೆರಳಿ ಗೂಳಪ್ಪ ಬೂದಿಹಾಳ ಅವರ ಆರೋಗ್ಯ ವಿಚಾರಿಸಿದರು. ಹುಬ್ಬಳ್ಳಿಯ ಅನೇಕ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಪಡೆದಿದ್ದರು. ಬಳಿಕ ಗೂಳಪ್ಪನ ಅವರು ಕುಟುಂಬ ಸಮೇತ ಮುಧೋಳಕ್ಕೆ ತೆರಳಿ ಅಲ್ಲಿಯೇ ವಾಸವಾಗಿದ್ದರು. ಇತ್ತೀಚೆಗೆ ಯಡಹಳ್ಳಿಗೆ ಭೇಟಿ ನೀಡಿದ್ದ ಸಭಾಪತಿ ಬಸವರಾಜ ಹೊರಟ್ಟಿ, ಗೂಳಪ್ಪ ಅವರ ಮನೆಗೆ ಭೇಟಿ ಕೊಟ್ಟು ಆರೋಗ್ಯದ ಬಗ್ಗೆ ವಿಚಾರಿಸಿದರು. ಆ ಕುಟುಂಬಕ್ಕೆ 50 ಸಾವಿರ ರೂ. ಸಹಾಯ ನೀಡಿದ ಹೊರಟ್ಟಿಯವರು ಅವರ ಇಬ್ಬರು ಮಕ್ಕಳ ಶಿಕ್ಷಣದ ಸಂಪೂರ್ಣ ಜವಾಬ್ದಾರಿ ತಮ್ಮ ಅವ್ವ ಸೇವಾ ಟ್ರಸ್ಟ್ ವತಿಯಿಂದ ಭರಿಸುವುದಾಗಿ ಮತ್ತು ಆ ಕುಟುಂಬಕ್ಕೆ ಮುಧೋಳದಲ್ಲಿ ಮನೆ ಕಟ್ಟಿಕೊಳ್ಳಲು ಒಂದು ಜಾಗ ಕೊಡಿಸುವುದಾಗಿಯೂ ಭರವಸೆ ನೀಡಿದ್ದಾರೆ.



ಕೃಷಿ ಕಾರ್ಮಿಕ ಗೂಳಪ್ಪ ಬೂದಿಹಾಳ ಮನೆಗೆ ಭೇಟಿ ನೀಡಿ ಸಮಾಧಾನ ಹೇಳಿದ ವಿಧಾನ ಪರಿಷತ್ತಿನ ಸಭಾಪತಿ ಬಸವರಾಜ ಹೊರಟ್ಟಿ.

# ಮಾನವೀಯತೆಯ ಪ್ರತಿರೂಪ ಸಭಾಪತಿ ಹೊರಟ್ಟಿ



ಸಾಹೇಬ್ರು ದೇವರಂಥವ್ರು. ನಮ್ಮನ್ನ ಆಳುಗಳಂತೆ ಎಂದಿಗೂ ನೋಡದೆ ಮನೆಯ ಮಕ್ಕಳಂತೆ ಕಂಡಿದ್ದಾರೆ. ನಾವೂ ಸಹ ಅವರ ಜಮೀನಿನಲ್ಲಿ ಮನೆಯವರಂತೆಯೆ ದುಡಿದ್ದೇವೆ. ಈಗ ನಮ್ಮ ಕೈಲಿ ಆಗುವುದಿಲ್ಲ ಎಂದು ತಿಳಿದೂ ಸಾಹೇಬ್ರು ನನ್ನ ಭೇಟಿಗೆ ಬಂದು ಇಷ್ಟೆಲ್ಲ ಸಹಾಯ ಮಾಡಿರುವುದು ಅವರಿಗೆ ನಮ್ಮ ಮೇಲೆ ಇರುವ ಪ್ರೀತಿಯನ್ನು ತೋರಿಸುತ್ತದೆ. ಇಂತಹವರ ಕೈಯಲ್ಲಿ ದುಡಿದದ್ದು ನನ್ನ ಜನ್ಮದ ಪುಣ್ಯ ಎಂದುಕೊಂಡಿದ್ದೇನೆ. ನಮ್ಮನ್ನಷ್ಟೇ ಅಲ್ಲ, ಅವರ ಜಮೀನಿನಲ್ಲಿ ಕೆಲಸ ಮಾಡುವ ಎಲ್ಲರನ್ನೂ ಅವರು ತಮ್ಮ ಮಕ್ಕಳ ಹಾಗೇ ನೋಡಿಕೊಳ್ಳುತ್ತಾರೆ. ಸಾಹೇಬ್ರು ಇನ್ನೂ ನೂರುಕಾಲ ಚೆನ್ನಾಗಿ ಬಾಳಬೇಕೆಂದು ಕೃತಜ್ಞತೆಯಿಂದ ಕೈ ಮುಗಿಯುತ್ತಾನೆ ಗೊಳಪ್ಪ.

**ಗದಗ:** ವಿಧಾನ ಪರಿಷತ್ತಿನ ಸಭಾಪತಿ ಬಸವರಾಜ ಹೊರಟ್ಟಿಯವರಿಗೆ ತಮ್ಮೂರು, ತಮ್ಮ ತಾಲೂಕಿನ ಜನ ಎಂದರೆ ಇನ್ನಿಲ್ಲದ ಪ್ರೀತಿ, ಅಭಿಮಾನ. ಮುಧೋಳ ಪಟ್ಟಣದ ಗೋವಿಂದಪುರದ ನಿವಾಸಿ ಗೊಳಪ್ಪ ಬೂದಿಹಾಳ ಕಳೆದ ಇಪ್ಪತ್ತೈದು ವರ್ಷಗಳಿಂದ ಹೊರಟ್ಟಿಯವರ ಹುಬ್ಬಳ್ಳಿಯ ಜಮೀನಿನಲ್ಲಿ ಕುಟುಂಬ ಸಮೇತನಾಗಿ ದುಡಿಯುತ್ತಿದ್ದ. ಈಚೆಗೆ ಅವನಿಗೆ ಅನಾರೋಗ್ಯ ಕಾಡುತ್ತಿತ್ತು. ಹೊರಟ್ಟಿಯವರು ಹುಬ್ಬಳ್ಳಿಯ ಅನೇಕ ಆಸ್ಪತ್ರೆಗಳಲ್ಲಿ ಅವನನ್ನು ತೋರಿಸಿ ಚಿಕಿತ್ಸೆ ಕೊಡಿಸಿದರೂ ಚಿಕಿತ್ಸೆ ಫಲಕಾರಿಯಾಗದ್ದರಿಂದ ಗೊಳಪ್ಪನ ಕುಟುಂಬ ಮರಳಿ ಮುಧೋಳಕ್ಕೆ ಬಂದಿದೆ.

ಈಚೆಗೆ ಯಡಹಳ್ಳಿಗೆ ಭೇಟಿ ನೀಡಿದ್ದ ಸಭಾಪತಿಗಳು ನೇರವಾಗಿ ಗೊಳಪ್ಪ ಬೂದಿಹಾಳನ ಮನೆಗೆ ಭೇಟಿ ಕೊಟ್ಟು ಅವನ ಆರೋಗ್ಯದ ಬಗ್ಗೆ ವಿಚಾರಿಸಿದರು. ತಮ್ಮ ಜಮೀನಿನ ಕಾರ್ಯಗಳನ್ನು ಕಾಳಜಿಯಿಂದ ನೋಡಿಕೊಂಡ ವ್ಯಕ್ತಿ ಇಂದು ಅನಾರೋಗ್ಯದಿಂದ ಜರ್ಜರಿತನಾಗಿರುವುದನ್ನು ಕಂಡು ಮಮ್ಮಲ ಮರುಗಿದರು.

ಆ ಕುಟುಂಬಕ್ಕೆ ಐವತ್ತು ಸಹಸ್ರ ರೂಪಾಯಿಗಳ ಧನ ಸಹಾಯ ನೀಡಿದ ಸಭಾಪತಿ ಹೊರಟ್ಟಿಯವರು ಅವರ ಇಬ್ಬರು ಮಕ್ಕಳ ಶಿಕ್ಷಣದ ಸಂಪೂರ್ಣ ಜವಾಬ್ದಾರಿಯನ್ನು ತಮ್ಮ ಅವ್ವ ಸೇವಾ ಟ್ರಸ್ಟ್ ವತಿಯಿಂದ ಭರಿಸುವುದಾಗಿ ತಿಳಿಸಿದರು. ಅಲ್ಲದೆ ಈ ಕುಟುಂಬಕ್ಕೆ ಮುಧೋಳದಲ್ಲಿ ಮನೆ ಕಟ್ಟಿಕೊಳ್ಳಲು ಒಂದು ಜಾಗೆಯನ್ನು ಕೊಡಿಸುವುದಾಗಿಯೂ ಕುಟುಂಬದವರಿಗೆ ಸಭಾಪತಿ ಬಸವರಾಜ ಹೊರಟ್ಟಿ ಭರವಸೆ ನೀಡಿದರು.

ನಾನು ಇನ್ನೂ ಬೇಗನೆ ಗೊಳಪ್ಪನ ಭೇಟಿಗೆ ಬರಬೇಕೆಂದು ಮಾಡಿದ್ದೆ. ಆದರೆ ಕೆಲವೊಂದು ಸರಕಾರಿ ಕಾರ್ಯಗಳ ನಿಮಿತ್ತ ಬೆಂಗಳೂರಿಗೆ ಹೋಗಿದ್ದರಿಂದ ಬೇಗನೆ ಬರಲಾಗಲಿಲ್ಲ. ಅದಕ್ಕಾಗಿ ವಿಷಾದಿಸುತ್ತೇನೆ ಎಂದು ಹೊರಟ್ಟಿ ಹೇಳಿದರು.

# ಮಾನವೀಯತೆಯ ಪ್ರತಿರೂಪ ಸಭಾಪತಿ ಬಸವರಾಜ ಹೊರಟ್ಟಿ



ಗದಗ, ಮೇ 23.ವಿಧಾನ ಪರಿಷತ್ತಿನ ಸಭಾಪತಿ ಬಸವರಾಜ ಹೊರಟ್ಟಿಯವರಿಗೆ ತಮ್ಮೂರು, ತಮ್ಮ ತಾಲೂಕಿನ ಜನ ಎಂದರೆ ಇನ್ನಿಲ್ಲದ ಪ್ರೀತಿ, ಅಭಿಮಾನ. ಮುಧೋಳ ಪಟ್ಟಣದ ಗೋವಿಂದಪುರದ ನಿವಾಸಿ ಗೂಳಪ್ಪ ಬೂದಿಹಾಳ ಕಳೆದ ಇಪ್ಪತ್ತೈದು ವರ್ಷಗಳಿಂದ ಹೊರಟ್ಟಿಯವರ ಹುಬ್ಬಳ್ಳಿಯ ಜಮೀನಿನಲ್ಲಿ ಕುಟುಂಬ ಸಮೇತನಾಗಿ ದುಡಿಯುತ್ತಿದ್ದ. ಈಚೆಗೆ ಅವನಿಗೆ ಅನಾರೋಗ್ಯ ಕಾಡುತ್ತಿತ್ತು. ಹೊರಟ್ಟಿಯವರು ಹುಬ್ಬಳ್ಳಿಯ ಅನೇಕ ಆಸ್ಪತ್ರೆಗಳಲ್ಲಿ ಅವನನ್ನು ತೋರಿಸಿ ಚಿಕಿತ್ಸೆ ಕೊಡಿಸಿದರೂ ಚಿಕಿತ್ಸೆ ಫಲಕಾರಿಯಾಗದ್ದರಿಂದ ಗೂಳಪ್ಪನ ಕುಟುಂಬ ಮರಳಿ ಮುಧೋಳಕ್ಕೆ ಬಂದಿದೆ.

ಈಚೆಗೆ ಯಡಹಳ್ಳಿಗೆ ಭೇಟಿ ನೀಡಿದ್ದ ಸಭಾಪತಿಗಳು ನೇರವಾಗಿ ಗೂಳಪ್ಪ ಬೂದಿಹಾಳನ ಮನೆಗೆ ಭೇಟಿ ಕೊಟ್ಟು ಅವನ ಆರೋಗ್ಯದ ಬಗ್ಗೆ ವಿಚಾರಿಸಿದರು. ತಮ್ಮ ಜಮೀನಿನ ಕಾರ್ಯಗಳನ್ನು ಕಾಳಜಿಯಿಂದ ನೋಡಿಕೊಂಡ ವ್ಯಕ್ತಿ ಇಂದು ಅನಾರೋಗ್ಯದಿಂದ ಜರ್ಜರಿತನಾಗಿರುವುದನ್ನು ಕಂಡು ಮಮ್ಮಲ ಮರುಗಿದರು.

ಆ ಕುಟುಂಬಕ್ಕೆ ಐವತ್ತು ಸಹಸ್ರ ರೂಪಾಯಿಗಳ ಧನ ಸಹಾಯ ನೀಡಿದ ಸಭಾಪತಿ ಹೊರಟ್ಟಿಯವರು ಅವರ ಇಬ್ಬರು ಮಕ್ಕಳ ಶಿಕ್ಷಣದ ಸಂಪೂರ್ಣ ಜವಾಬ್ದಾರಿಯನ್ನು ತಮ್ಮ ಅವ್ವ ಸೇವಾ ಟ್ರಸ್ಟ್ ವತಿಯಿಂದ ಭರಿಸುವುದಾಗಿ ತಿಳಿಸಿದರು. ಅಲ್ಲದೆ ಈ ಕುಟುಂಬಕ್ಕೆ ಮುಧೋಳದಲ್ಲಿ ಮನೆ ಕಟ್ಟಿಕೊಳ್ಳಲು ಒಂದು ಜಾಗೆಯನ್ನು ಕೊಡಿಸುವುದಾಗಿಯೂ ಕುಟುಂಬದವರಿಗೆ ಸಭಾಪತಿ ಬಸವರಾಜ ಹೊರಟ್ಟಿ ಭರವಸೆ ನೀಡಿದರು.

ನಾನು ಇನ್ನೂ ಬೇಗನೆ ಗೂಳಪ್ಪನ ಭೇಟಿಗೆ ಬರಬೇಕೆಂದು ಮಾಡಿದ್ದೆ. ಆದರೆ ಕೆಲವಷ್ಟು ಸರಕಾರಿ ಕಾರ್ಯಗಳ ನಿಮಿತ್ಯ ಬೆಂಗಳೂರಿಗೆ ಹೋಗಿದ್ದರಿಂದ ಬೇಗನೆ ಬರಲಾಗಲಿಲ್ಲ. ಅದಕ್ಕಾಗಿ ವಿಷಾದಿಸುತ್ತೇನೆ ಎಂದು ಹೊರಟ್ಟಿ ಹೇಳಿದರು.

**ಸಾಹೇಬ್ರು ದೇವರಂಥವ್ರು. ನಮ್ಮನ್ನ ಆಳುಗಳಂತೆ ಎಂದಿಗೂ ನೋಡದೆ ಮನೆಯ ಮಕ್ಕಳಂತೆ ಕಂಡಿದ್ದಾರೆ. ನಾವೂ ಸಹ ಅವರ ಜಮೀನಿನಲ್ಲಿ ಮನೆಯವರಂತೆಯೆ ದುಡಿದ್ದೇವೆ. ಈಗ ನಮ್ಮ ಕೈಲಿ ಆಗುವುದಿಲ್ಲ ಎಂದು ತಿಳಿದು ಸಾಹೇಬ್ರು ನನ್ನ ಭೇಟಿಗೆ ಬಂದು ಇಷ್ಟೆಲ್ಲ ಸಹಾಯ ಮಾಡಿರುವುದು ಅವರಿಗೆ ನಮ್ಮ ಮೇಲೆ ಇರುವ ಪ್ರೀತಿಯನ್ನು ತೋರಿಸುತ್ತದೆ. ಇಂತಹವರ ಕೈಯಲ್ಲಿ ದುಡಿದದ್ದು ನನ್ನ ಜನ್ಮದ ಪುಣ್ಯ ಎಂದುಕೊಂಡಿದ್ದೇನೆ. ನಮ್ಮನ್ನಷ್ಟೇ ಅಲ್ಲ, ಅವರ ಜಮೀನಿನಲ್ಲಿ ಕೆಲಸ ಮಾಡುವ ಎಲ್ಲರನ್ನೂ ಅವರು ತಮ್ಮ ಮಕ್ಕಳ ಹಾಗೇ ನೋಡಿಕೊಳ್ಳುತ್ತಾರೆ. ಸಾಹೇಬ್ರು ಇನ್ನೂ ನೂರ್ಕಾಲ ಚೆನ್ನಾಗಿ ಬಾಳಬೇಕೆಂದು ಕೃತಜ್ಞತೆಯಿಂದ ಕೈ ಮುಗಿಯುತ್ತಾನೆ ಗೂಳಪ್ಪ**

# ಮಾನವೀಯತೆ ಮೆರೆದ ಸಭಾಪತಿ ಹೊರಟ್ಟಿ



ಕೃಷಿ ಕಾರ್ಮಿಕ ಗೂಳಪ್ಪ ಬೂದಿಹಾಳ ಮನೆಗೆ ಭೇಟಿ ನೀಡಿ ಸಮಾಧಾನ ಹೇಳಿದ ವಿಧಾನ ಪರಿಷತ್ತಿನ ಸಭಾಪತಿ ಬಸವರಾಜ ಹೊರಟ್ಟಿ.

**ಹುಬ್ಬಳ್ಳಿ:** ತಮ್ಮ ತೋಟದ ಕೆಲಸಗಾರ ಗೂಳಪ್ಪ ಬೂದಿಹಾಳ ಅವರು ತೀವ್ರ ಅನಾರೋಗ್ಯಕ್ಕೀಡಾಗಿದ್ದರಿಂದ ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ಅವರು ಗೂಳಪ್ಪ ಬೂದಿಹಾಳ ಅವರ ನಿವಾಸಕ್ಕೆ ತೆರಳಿ ಆರೋಗ್ಯ ವಿಚಾರಿಸಿದರು.

ಹುಬ್ಬಳ್ಳಿಯ ಅನೇಕ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಪಡೆದಿದ್ದರು. ಬಳಿಕ ಗೂಳಪ್ಪ ಅವರು ಕುಟುಂಬ ಸಮೇತ ಮುಧೋಳಕ್ಕೆ ತೆರಳಿ ಅಲ್ಲಿಯೇ ವಾಸವಾಗಿದ್ದರು. ಇತ್ತೀಚೆಗೆ ಯಡಹಳ್ಳಿಗೆ ಭೇಟಿ ನೀಡಿದ್ದ ಸಭಾಪತಿ ಬಸವರಾಜ ಹೊರಟ್ಟಿ, ಗೂಳಪ್ಪ ಅವರ ಮನೆಗೆ ಭೇಟಿ ಕೊಟ್ಟು ಆರೋಗ್ಯದ ಬಗ್ಗೆ ವಿಚಾರಿಸಿದರು.

ಆ ಕುಟುಂಬಕ್ಕೆ ಐವತ್ತು ಸಾವಿರ ರೂ. ಸಹಾಯ ನೀಡಿದ ಹೊರಟ್ಟಿಯವರು ಅವರ ಇಬ್ಬರು ಮಕ್ಕಳ ಶಿಕ್ಷಣದ ಸಂಪೂರ್ಣ ಜವಾಬ್ದಾರಿಯನ್ನು ತಮ್ಮ ಅವ್ವ ಸೇವಾ ಟ್ರಸ್ಟ್ ವತಿಯಿಂದ ಭರಿಸುವುದಾಗಿ ಮತ್ತು ಆ ಕುಟುಂಬಕ್ಕೆ ಮುಧೋಳದಲ್ಲಿ ಮನೆ ಕಟ್ಟಿಕೊಳ್ಳಲು ಒಂದು ಜಾಗೆಯನ್ನು ಕೊಡಿಸುವುದಾಗಿಯೂ ಭರವಸೆ ನೀಡಿದ್ದಾರೆ.

Hubli Edition